## ಕರ್ನಾಟಕ ಪಬ್ಲಿಕ್ ಶಾಲೆ ನಾಮಫಲಕ ಅನಾವರಣ, ಉಚಿತ ಬೈಸಿಕಲ್ ವಿತರಣೆ

# ಕಾಲೇಜು ಅಭಿವೃದ್ಧಿಗೆ ₹1.70 ಕೋಟಿ

**ದಿಗಂತ ವರದಿ, ಚಾಮರಾಜನಗರ**



ಜಿಲ್ಲೆಯ ಕಾಲೇಜುಗಳ ಅಭಿವೃದ್ಧಿಗೆ ರಾಜ್ಯ ಸರ್ಕಾರ 1.70 ಕೋಟಿ ರೂಗಳನ್ನು ನೀಡಿದೆ ಎಂದು ಜಿಲ್ಲಾ ಉಸ್ತುವಾರಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಸಿ. ಪುಟ್ಟರಂಗಶೆಟ್ಟಿ ತಿಳಿಸಿದರು.

ತಾಲೂಕಿನ ಚಂದಕವಾಡಿ ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ನಡೆದ ಕರ್ನಾಟಕ ಪಬ್ಲಿಕ್ ಶಾಲೆ ನಾಮಫಲಕ ಅನಾವರಣ ಮತ್ತು ಉಚಿತ ಬೈಸಿಕಲ್ ವಿತರಣಾ ಕಾರ್ಯಕ್ರಮದಲ್ಲಿ ಮಾತನಾಡಿದರು.

ಚಂದಕವಾಡಿ ಗ್ರಾಮವು ಹೋಬಳಿ ಕೇಂದ್ರವಾಗಿದ್ದು, ಈ ಶಾಲೆಯಲ್ಲಿಓದುವಬಹುಪಾಲುವಿದ್ಯಾರ್ಥಿಗಳುಹಿಂದುಳಿದ ಮತ್ತು ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದವರಾಗಿದ್ದಾರೆ. ಆದ್ದರಿಂದ ಈ ಶಾಲೆಯನ್ನು ಕರ್ನಾಟಕ ಪಬ್ಲಿಕ್ ಶಾಲೆಯಾಗಿ ಮಾರ್ಪಾಡು ಮಾಡಲು ಕ್ರಮ ಕೈಗೊಳ್ಳಲಾಗಿದೆ ಎಂದರು.

ಕರ್ನಾಟಪಕ ಪಬ್ಲಿಕ್ ಸ್ಕೂಲ್‌ನಲ್ಲಿ 1ರಿಂದ 12ನೇ ತರಗತಿ ವರೆಗೆ ಒಂದೇ ಶಾಲೆಯಲ್ಲಿ ವಿದ್ಯಾಬ್ಯಾಸ ಮಾಡುವ ವ್ಯವಸ್ಥೆ ಕಲ್ಪಿಸಲಾಗಿದೆ. ಶಾಲೆಯ ಎಲ್ಲಾ ಕಾರ್ಯಕ್ರಮಗಳು ಒಂದೆಸೂರಿನಡಿ ನಡೆಯಲ್ಲಿದೆ ಇದಕ್ಕಾಗಿ 3 ಸಾಮಾನ್ಯ ಕೊಠಡಿ, 2 ಪ್ರಯೋಗಶಾಲೆ, 2 ಹೈಟೆಕ್ ಶೌಚಾಲಯ ನಿರ್ಮಿಸಲಾಗುವುದು ಎಂದರು. ಹೈಸ್ಕೂಲ್ ಮತ್ತು ಕಾಲೇಜಿನಲ್ಲಿಹೆಚ್ಚುಹೆಚ್ಚುವಿದ್ಯಾರ್ಥಿಗಳುದಾಖಲಾಗುತ್ತಿದ್ದು ಮುಂದಿನ ದಿನಗಳಲ್ಲಿ ಪದವಿ ಕಾಲೇಜನ್ನು ಆರಂಭಿಸುವ ಚಿಂತನೆ ಇದೆ ಎಂದರು.

ಈ ಬಾರಿ ಸೈಕಲ್ ವಿತರಣೆ ವಿಳಂಭವಾಗಿದೆ ಅದಕ್ಕೆ ಕಳಪೆ ಆರೋಪ ಮತ್ತು ಜೋಡಣೆ ಕಾರ್ಯವೇ ಕಾರಣ ಎಂದ ಅವರು ಜಿಲ್ಲೆಯಲ್ಲಿ ಎಲ್ಲಾ ವಿಧದ ಶಿಕ್ಷಣ ಸೌಲಭ್ಯವಿದ್ದು ಕಾನೂನು ಕಾಲೇಜು ತೆರೆಯಬೇಕಾಗಿದೆ. ಈ ದೇಶ ಮುಂದುವರಿಯಬೇಕಾದರೆ ಅದು ಶಿಕ್ಷಣದಿಂದ ಮಾತ್ರ ಸಾಧ್ಯ ಎಂದು ತಿಳಿಸಿದರು.

ಜಿಲ್ಲಾ ಪಂಚಾಯತ್ ಸದಸ್ಯ ಆರ್.ಬಾಲರಾಜು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ ಕರ್ನಾಟಕ ಪಬ್ಲಿಕ್ ಶಾಲೆಗೆ 5ಎಕರೆ ಜಾಗದ ಅವಶ್ಯಕತೆಯಿದ್ದು ಕಾಲೇಜು ಮತ್ತು ಪಕ್ಕದಲೆ ಇರುವ ಪ್ರೈಮರಿ ಶಾಲೆಯ ಜಾಗವನ್ನು ಒಂದೇ ಖಾತೆಗೆ ಸೇರಿಸಿದರೆ ಕಟ್ಟಡ ನಿರ್ಮಾಣ ಸೇರಿದಂತೆ ಇನ್ನಿತರೆ ಆಡಳಿತಾತ್ಮಕ ಕೆಲಸಗಳು ಸುಗಮವಾಗಿ ನಡೆಯಲು ಅನುಕೂಲವಾಗಲಿದೆ ಎಂದರು.

ಪೋಷಕರು ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸಿದ ಮಾತ್ರಕ್ಕೆ ತಮ್ಮ ಜವಾಬ್ದಾರಿ ಮುಗಿಯಿತು ಎಂದುಕೊಳ್ಳಬಾರದು. ಮಕ್ಕಳು ದಾರಿ ತಪ್ಪದಂತೆ ನಿಗಾವಹಿಸಬೇಕು, ಶಾಲೆಗೆ ಬೇಟಿ ನೀಡಿ ನಮ್ಮ ಮಕ್ಕಳು ಓದುತ್ತಿದ್ದಾರೆಯೇ ಎಂದು ವಿಚಾರಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ಕಾಲೇಜಿನಲ್ಲಿ ಉತ್ತಮ ಫಲಿತಾಂಶ ಬರುತ್ತಿದ್ದು ಅಗತ್ಯ ಮೂಲ ಸೌಲಭ್ಯಕ್ಕೆ ಸರ್ಕಾರದಿಂದ ಹೆಚ್ಚಿನ ಅನುದಾನ ದೂರಕಿಸಿಕೊಡುವಂತೆ ಸಚಿವರಲ್ಲಿ ಮನವಿಮಾಡಿದರು.

ಕಾರ್ಯಕ್ರಮದಲ್ಲಿ ಗ್ರಾಪಂ ಅಧ್ಯಕ್ಷ ಸಿದ್ದಪ್ಪಾಜಿ, ತಾಪಂ ಸದಸ್ಯೆ ದೊಡ್ಡತಾಯಮ್ಮ, ಗ್ರಾಪಂ ಉಪಾಧ್ಯಕ್ಷ ನಾಗನಾಯಕ, ಡಿಡಿಪಿಐ ಮಂಜುಳ, ಬಿಇಓ ಲಕ್ಷ್ಮೀಪತಿ, ಪ್ರಾಂಶುಪಾಲ ಡಿ.ಎಸ್.ಕೃಷ್ಣಮೂರ್ತಿ, ಉಪಪ್ರಾಂಶುಪಾಲೆ ರುಕೀಯಾ ಬೇಗಂ, ಸೇರಿದಂತೆ ಶಾಲಾಭಿವೃದ್ಧಿ ಸಮಿತಿಯ ಸದಸ್ಯರುಗಳು ಉಪಸ್ಥಿತರಿದ್ದರು.


**ಎನರ್ಜಿ ಡೆವಲಪ್ಮೆಂಟ್ ಕಂಪೆನಿ ಲಿಮಿಟೆಡ್**

ಸಿಐಎನ್-ಎಲ್85110ಕೆಎ1995ಪಿಎಲ್ಸಿ017003
ರಿ.ಕಚೇರಿ: ಗ್ರಾಮ-ಹುಲುಗುಂದ, ತಾಲೂಕು-ಸೋಮವಾರಪೇಟೆ
ಜಿಲ್ಲೆ-ಕೊಡಗು, ಕರ್ನಾಟಕ-571233
ಫೋನ್ ನಂ. 08276-277040, ಫ್ಯಾಕ್ಸ್ ನಂ. 08276-277012
ಇ-ಮೇಲ್:secretarial@edclgroup.com ; ವೆಬ್‌ಸೈಟ್:www.edclgroup.com

ಸೆಬಿ (ಲಿಸ್ಟಿಂಗ್ ಹೊಣೆ ಮತ್ತು ಹೊರಗೆಡಹುವ ಅಗತ್ಯತೆ) ರೆಗ್ಯುಲೇಶನ್ಸ್ 2015ರ ನಿಯಮ 47ಕ್ಕೆ ಅನ್ವಯಿಸಿ ನೀಡಲಾದ ನೋಟೀಸು ಏನೆಂದರೆ, 31ನೇ ಡಿಸೆಂಬರ್ 2018ರಂದು ಅಂತ್ಯವಾದ ತ್ರೈಮಾಸಿಕದ ಅಪರಿಶೋಧಿತ ಹಣಕಾಸು ಫಲಿತಾಂಶವನ್ನು ಪರಿಶೀಲಿಸಿ ಅಂಗೀಕರಿಸುವುದಕ್ಕೆ ಹಾಗೂ ಇತರ ವಿಷಯಗಳ ಬಗ್ಗೆ ಕಂಪೆನಿಯ ನಿರ್ದೇಶಕರ ಮಂಡಳಿ ಸಭೆ ಸೋಮವಾರ, 11ನೇ ಫೆಬ್ರವರಿ 2019ರಂದು ನಡೆಯಲಿದೆ.

ಕಂಪೆನಿಯ ನೀತಿ ಸಂಹಿತೆಯ ಪ್ರಕಾರ ಕಂಪೆನಿಯ ಸೆಕ್ಯುರಿಟಿಗಳಲ್ಲಿ ವ್ಯವಹರಿಸುವ 'ಟ್ರೇಡಿಂಗ್ ವಿಂಡೋ' ಎಲ್ಲ ನಿರ್ದೇಶಕರು ಪ್ರಮೋಟರ್ಸ್, ನಿಯೋಜಿತ ಉದ್ಯೋಗಿಗಳು ಮತ್ತು ಸಂಬಂಧಿಸಿದ ವ್ಯಕ್ತಿಗಳಿಗೆ ಮಂಗಳವಾರ 5ನೇ ಫೆಬ್ರವರಿ 2019ರಿಂದ ಬುಧವಾರ 13ನೇ ಫೆಬ್ರವರಿ 2019ರವರೆಗೆ (ಎರಡೂ ದಿನಗಳು ಸೇರಿವೆ) ಮುಚ್ಚಿರಲಿದೆ.

ಈ ಮಾಹಿತಿ ಕಂಪೆನಿಯ ವೆಬ್‌ಸೈಟ್ www.edclgroup.com ಮತ್ತು ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್ www.bseindia.com ಮತ್ತು www.nseindia.comನಲ್ಲಿ ಕೂಡ ಲಭ್ಯ.

ಮಂಡಳಿಯ ಆದೇಶದ ಮೇರೆಗೆ
ಎನರ್ಜಿ ಡೆವಲಪ್ಮೆಂಟ್ ಕಂಪೆನಿ ಲಿಮಿಟೆಡ್ ಪರವಾಗಿ
ಸಹಿ/-
ವಿಜಯಶ್ರೀ ಬಿನ್ನಾಣಿ
(ಕಂಪೆನಿ ಕಾರ್ಯದರ್ಶಿ)

ಸ್ಥಳ: ಕೋಲ್ಕತಾ
ದಿನಾಂಕ: 04ನೇ ಫೆಬ್ರವರಿ, 2019.


## ಶ್ರೀರಂಗನಾಥ ಸ್ವಾಮಿಗೆ ಅದ್ದೂರಿ ತಿರುಕಲ್ಯಾಣೋತ್ಸವ



ನೆಲಮಂಗಲ ಪಟ್ಟಣ ಸಮೀಪ ದಾಸನಪುರದ ಶ್ರೀದೇವಿ ಭೂದೇವಿ ಸಮೇತ ಶ್ರೀ ರಂಗನಾಥಸ್ವಾಮಿ ದೇವಾಲಯದಲ್ಲಿ 7ನೇ ವರ್ಷದ ವಾರ್ಷಿಕೊತ್ಸವ ಹಾಗೂ ತಿರುಕಲ್ಯಾಣೋತ್ಸವ ನಡೆಸಲಾಯಿತು.

**ನೆಲಮಂಗಲ :** ಶ್ರೀ ರಂಗನಾಥ ಸ್ವಾಮಿಯ


ಕರ್ನಾಟಕ ಸರ್ಕಾರ

**ನಮೂನೆ ಸಂಖ್ಯೆ 4**
**831 (82ನೇ ಪ್ರಕರಣವನ್ನು ನೋಡಿ)**
**ಆಪಾದಿತ ವ್ಯಕ್ತಿಯ ಹಾಜರಾತಿಯನ್ನು ಅಗತ್ಯ ಪಡಿಸಲು ಉದ್ಘೋಷಣೆ**

(ಆರೋಪಿಯ ಹೆಸರು ಮತ್ತು ವಿಳಾಸ **S.A.Bharathi, W/o K.R.Jaganath, No.184, 2nd Main, 18th Cross, Agrahara Layout, Yelhanka, B.lore-North, Bangalore-64.** ವಿಳಾಸದಲ್ಲಿ ವಾಸವಿರುವಾತನು ಭಾರತ ದಂಡ ಸಂಹಿತೆಯ – ಪ್ರಕರಣದ ಮೇರೆಗೆ ದಂಡನೀಯವಾದ **U/s 138 of N.I.Act** ಅಪರಾಧವನ್ನು ಮಾಡಿರುವನೆಂದು (ಅಥವಾ ಮಾಡಿರಬಹುದೆಂಬ ಶಂಕೆಯ ಮೇಲೆ) ನನಗೆ ಫಿರ್ಯಾದು ಬಂದಿರುವುದರಿಂದ ಮತ್ತು ಅದರ ಮೇಲೆ ಹೊರಡಿಸಲಾದ ದಸ್ತಗಿರಿ ವಾರಂಟು ಸದರಿ ವ್ಯಕ್ತಿ **All** ಸಿಕ್ಕಿಲ್ಲವೆಂಬ ಹಿಂಬರಹದೊಂದಿಗೆ ವಾಪಸ್ಸಾಗಿರುವುದರಿಂದ ಮತ್ತು ಸದರಿ ವ್ಯಕ್ತಿ **Bangalore** ಸ್ಥಳ ತಪ್ಪಿಸಿಕೊಂಡಿರುವನೆಂದು (ಅಥವಾ ಸದರಿ ವಾರಂಟಿನ ಜಾರಿಯನ್ನು ತಪ್ಪಿಸಿಕೊಳ್ಳಲು ತಾನೇ ಬಚ್ಚಿಟ್ಟುಕೊಂಡಿರುವನೆಂದು) ನನಗೆ ಮನದಟ್ಟಾಗಿರುವುದರಿಂದ, ...ದ...ವ್ಯಕ್ತಿಯು ಈನ್ಯಾಯಾಲಯದ ಮುಂದೆ ಅಥವಾ ನನ್ನ ಮುಂದೆ (ಸ್ಥಳ) **18th ACM, Bangalore** ದಲ್ಲಿ 05/03/2019 ದಿನಾಂಕದಂದು ಸದರಿ ಫಿರ್ಯಾದಿಗೆ ಉತ್ತರಿಸಲು ಹಾಜರಾಗಬೇಕೆಂದು ಈ ಮೂಲಕ ಉದ್ಘೋಷಿಸಲಾಗಿದೆ.
(ನ್ಯಾಯಾಲಯದ ಮೊಹರು)

(ರುಜು)
**XVIII Chief Metropolitan Magistrate, C.M.M.Court, Bengaluru.**
ದಿನಾಂಕ: 31/1/19
ವಿ.ಸೂ: 17 ಸವಿಮುಗು–100 ಹಾಳೆಗಳ 2000 ಕಟ್ಟುಗಳು–09



ಕರ್ನಾಟಕ ಸರ್ಕಾರ

**ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಲೋ.ಇ. ವಿಭಾಗ, ಶಿವಮೊಗ್ಗ.**

ಪ್ರಕಟಣೆ ಸಂಖ್ಯೆ ಕಾಪಾಅ/ಶಿವಿಶಿ/ಜೆಇ-2/ಐ.ಎಫ್.ಟಿ.-30-ಮುಂ-01/18-19
ದಿನಾಂಕ:25.01.2019

**ಅಲ್ಪಾವಧಿ ಟೆಂಡರ್ ಪ್ರಕಟಣೆ-1**

ಉಲ್ಲೇಖ(1):-ಟೆಂಡರ್ ಪ್ರಕಟಣೆ ಸಂಖ್ಯೆ ಕಾಪಾಅ/ಶಿವಿಶಿ/ಜೆಇ2/ಐ.ಎಫ್.ಟಿ.-30/2018-19/3012 ದಿನಾಂಕ: 04.01.2019

ಉಲ್ಲೇಖ(2) ಟೆಂಡರ್ ಪ್ರಕಟಣೆಯಲ್ಲಿನ ಕಾಮಗಾರಿಗಳನ್ನು ತಾಂತ್ರಿಕ ಕಾರಣದಿಂದ ಇ-ಪೋರ್ಟಲ್‌ನಡಿ ನಿಗದಿಪಡಿಸಿದ ದಿನಾಂಕದಂದು ಪ್ರಕಟಿಸಲು ಸಾಧ್ಯವಾಗದೇ ಇರುವುದರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ಅರ್ಹ ನೊಂದಾಯಿತ 3ನೇ ದರ್ಜೆ ಮತ್ತು ಮೇಲ್ಪಟ್ಟು,2ನೇ ದರ್ಜೆ ಮತ್ತು

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ
ಕಾರ್ಯಪಾಲಕ ಅಭಿಯಂತರರವರ ಕಚೇರಿ, ಧಾರವಾಡ ವಿಭಾಗ